ಮುಳವಾಡ ಏತ ನೀರಾವರಿಗೆ ಖರ್ಚು ಮಾಡಿದ ಹಣ.

946(1089) ಶ್ರೀ ಬಸನಗೌಡ ರಾಮನಗೌಡ ಪಾಟೀಲ (ವಿಜಾಪೇಟೆ) :— ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮುಳವಾಡ ಏತ ನೀರಾವರಿ ಯೋಜನೆ "ಎ" ಸ್ಕೀಂದಲ್ಲಿ ಬರುವ 30850 ಹೆಕ್ಟೇರ್ ನೀರಾವರಿಗಾಗಿ ಬೇಕಾಗಿರುವ ಮೊತ್ತವೆಷ್ಟು? ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಆ) ಮತ್ತು ಇ) ದಿನಾಂಕ: 31-05-2000 ಒಳಗೆ ಆಗಬೇಕಾಗಿರುವ ಕಾಮಗಾರಿಗಳು ಮುಗಿಯಲು ಆರ್ಥಿಕ ಮತ್ತು ಭೌತಿಕ ಪ್ರಗತಿಗಳ ಬಗ್ಗೆ ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳೇನು? ಬಳೂತಿ ಜಾಕ್‌ವೆಲ್ ಮತ್ತು ಇನ್ನಿತರ ಕಾಮಗಾರಿಗಳನ್ನು ತ್ವರಿತವಾಗಿ ನಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :—

ಅ) ಅಂದಾಜು ಮೊತ್ತ ರೂ. 311.87 ಕೋಟಿಗಳು. ಫೆಬ್ರುವರಿ 1999ರವರೆಗೆ ಮುಳವಾಡ ಏತ ನೀರಾವರಿ ಯೋಜನೆಗೆ ರೂ. 20.55 ಕೋಟಿ ವೆಚ್ಚ ಮಾಡಲಾಗಿದೆ.

ಆ)ಇ) ಈ ಯೋಜನೆಯ ಕ್ರಿಟಿಕಲ್ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಕೆಳಕಂಡ ಕಾರ್ಯಕ್ರಮ ರೂಪಿಸಲಾಗಿದೆ.

1) ಬಳೂತಿ ಹತ್ತಿರದ ಮುಖ್ಯ ಸ್ಥಾವರದ ಕೆಲಸವೂ ಆರ್.ಎಲ್. 508.75 ಮೀ.ಗೆ ಬಂದಿದ್ದು, ಉಳಿದ ಕೆಲಸಗಳನ್ನು ಮೇ 1999 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

2) ಪ್ರವೇಶ ಕಾಲುವೆ, ನೀರಿನ ತೊಟ್ಟಿ ಹಾಗೂ ರೈಸಿಂಗ್ ಮೆನ್ ಎಂಬಾಕಮೆಂಟ್ ಕೆಲಸ ಮುಗಿದಿದೆ.

3) ಲೀಡ್ ಆಫ್ ಕೆನಾಲ್ 0 ರಿಂದ 5.4 ಕಿ.ಮೀ. ಹನುಮಾಪುರದ ಎರಡನೇ ಜಾಕ್‌ವೆಲ್, ಪೂರ್ವ ಕಾಲುವೆ 0 ರಿಂದ 17 ಕಿ.ಮೀ. ಮತ್ತು ಪಶ್ಚಿಮ ಕಾಲುವೆ 0 ರಿಂದ 85 ಕಿ.ಮೀ. ಕೆಲಸಗಳು ವಿವಿಧ ಹಂತದಲ್ಲಿದ್ದು ಈ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

4) ಈ ಕಾಮಗಾರಿಗಳಿಗೆ ಬೇಕಾಗುವ ಅನುದಾನವನ್ನು ಕೃಷ್ಣಾ ಭಾಗ್ಯ ಜಲ ನಿಗಮವು ಒದಗಿಸುವುದು.